ಓ ಎಸ್ ನಂ ಃ 88/2014 ( ಪಿಬ್ಲ್ಯೂ -1)

ದಿಃ 16-02-2018

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಆರ್ ವಿ ಜೆ ವಕೀಲರಿಂದಃ

ರಿಸ ನಂಃ 18/7 ಹಿರಿಯರಿಂದ ಬಂದ ಸ್ವತ್ತು ಎ ಂದರೆ ಸರಿ ಇದರ ವಿಸ್ತೀರ್ಣ 1 ಎಕರೆ 19 ಗುಂಟೆ ಇರುತ್ತದೆ. ಈ ಜಮೀನಿನಲ್ಲಿ 2 ಹಿಸ್ಸೆ ಆಗಬೇಕು. ಸದರಿ ವಿಸ್ತೀರ್ಣದಲ್ಲಿ ಅರ್ಧ ಹಿಸ್ಸೆ ಎಂದರೆ 29 ವರೆ ಗುಂಟೆ. ಸದರಿ ಜಮೀನಿನ ಉತಾರವನ್ನು ನಾನು ಸದ್ಯಕ್ಕೆ ನೋಡಿಲ್ಲ. ಸದರಿ ಜಮೀನಿನಲ್ಲಿ ಯಾವದೇ ಪಟ್ಟಗಳಿಲ್ಲ ಅಖಂಡವಾಗಿದೆ. ಸದರಿ ಜಮೀನಿನ ಉತಾರನಲ್ಲಿ ಬಾಗೋಜಿ ಭರ್ಮಾ ಹರಾಡೆ ಎನ್ನುವವರ ಹೆಸರು ದಾಖಲಾಗಿದೆ ಎಂದರೆ ಸರಿ. ಸದರಿ ಜಮೀನವನ್ನು ನಾವಿಬ್ಬರು ಸೇರಿ ನೋಂದ ಖರೀದಿ ಪತ್ರದನ್ವಯ ಕೊಟ್ಟದ್ದೇವೆ. ನಾನು ಮತ್ತು 1 ನೇ ಪ್ರತಿವಾದಿ ತಂದೆ ಇಬ್ಬರು ಸೇರಿ ಮಾರಾಟ ಮಾಡಿದ್ದೇವೆ. ಹಾಗೇ ಖರೀದಿ ಕೊಟ್ಟ ದಿನಾಂಕ ನೆನಪಿರುವದಿಲ್ಲ. ನಾನು ಮತ್ತು 1 ನೇ ಪ್ರತಿವಾದಿ ತಂದೆ ಜೊತೆಯಾಗಿ ಸದರಿ ಜಮೀನವನ್ನು ಮಾರಾಟ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಮತ್ತು 2 ನೇ ವಾದಿ ಜೊತೆಗೆ ಖರೀದಿ ಕೊಟ್ಟದ್ದೇವೆ ಎಂದರೆ ಸರಿಯಲ್ಲ. ಸದರಿ

ದಿಃ 16-02-2018

ಖರೀದಿ ಪತ್ರಕ್ಕೆ ಸಹಿ ಕೊಡುವಾಗ ಅದನ್ನು ಓದಿ ನೋಡಿ ತಿಳಿದು ಸಹಿ ಕೊಟ್ಟಿದ್ದೇನೆ. ಸದರಿ ಖರೀದಿ ಪತ್ರಕ್ಕೆ 1 ನೇ ಪ್ರತಿವಾದಿ ತಂದೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ಖರೀದಿ ಪತ್ರವನ್ನು ಹಾಜರುಪಡಿಸಲು ಆಕ್ಷೇಪ ಇಲ್ಲ. 4 ಮುಕ್ಕಾಲು ಗುಂಟೆ ಜಮೀನವನ್ನು ಖರೀದಿ ಕೊಟ್ಟಿದ್ದೇವೆ. ಸದರಿ 4 ಮುಕ್ಕಾಲು ಗುಂಟೆ ಜಮೀನು ಸುನಂದಾ ಹರಾಡೆ ಇವರ ಕಬ್ಜೆಯಲ್ಲಿದೆ. ಸದರಿ ಜಮೀವನ್ನು ಮಾರಾಟ ಮಾಡಿದ ಬಗ್ಗೆ ನಾನು ವಕೀಲರಿಗೆ ಮಾಹಿತಿ ನೀಡಿಲ್ಲ. ಸದರಿ ಜಮೀನಿನಲ್ಲಿ ಹರಾಡೆ ಇವರು ಮನೆ ಕಟ್ಟಿದ್ದಾರೆಂದರೆ ಸರಿ.

ರಿಸನಂಃ 18/7 ರಲ್ಲಿ 1 ನೇ ಪ್ರತಿವಾದಿ ಮನೆ ಕಟ್ಟಿದ್ದಾರೆಂದರೆ ಸಾಕ್ಷಿಯು ನಾವಿಬ್ಬರು ಸೇರಿ ಮನೆ ಕಟ್ಟಿದ್ದೇವೆ ಎಂದು ಹೇಳುತ್ತಾರೆ. ರ-ಃ ಕುರಿತಾದ ದಾಖಲೆಗಳು ನನ್ನಲ್ಲಿ ಇಲ್ಲ. ಸದರಿ ಮನೆಗೆ ವಿದ್ಯುತ ಸಂಪರ್ಕ ಇದ್ದು ಅದು 1 ನೇ ಪ್ರತಿವಾದಿ ಹೆಸರಿಗೆ ಇದೆ. ಸದರಿ ಮನೆಯ ಪಂಚಾಯಿತಿ ಉತಾರನಲ್ಲಿ 1 ನೇ ಪ್ರತಿವಾದಿ ಹೆಸರು ಇದೆ. ಸದರಿ ಮನೆಯ ಕ್ರಮ ಸಂಃ 330 ಇದೆ. ಸದರಿ ಮನೆಯನ್ನು ನಾನು ಮತ್ತು 1 ನೇ ಪ್ರತಿವಾದಿ ಜೊತೆಗೆ ಕಟ್ಟಿರುವ ಬಗ್ಗೆ ಉತಾರನಲ್ಲಿ ಹೆಸರು ನಮೂದಿಸಲು ನಾನು ಪಂಚಾಯಿತಿಗೆ ಅರ್ಜಿ ಕೊಟ್ಟಿಲ್ಲ. ಹಾಗೇ ಅರ್ಜಿ ಕೊಡಲು ತೊಂದರೆ ಇರಲಿಲ್ಲ. ಸದರಿ ಮನೆ ಕಟ್ಟಲು 1 ನೇ ಪ್ರತಿವಾದಿ ಹೆಸರಿಗೆ ಪರವಾಣಿಗೆ ಕೊಟ್ಟಿದ್ದಾರೆಂದರೆ ಸರಿ . ಸದರಿ ಮನೆಯ ಉತಾರವನ್ನು ನಾನು ನೋಡಿಲ್ಲ. ಸದರಿ ಮನೆಯ ಮೇಲೆ 1 ನೇ ಪ್ರತಿವಾದಿ ಘಟಪ್ರಭಾ ಕೋ-ಆಪ ಸೊಸೈಟಿಯಿಂದ ರೂ 2 ಲಕ್ಷ ಸಾಲ ಪಡೆದಿರುವ ವಿಚಾರ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ಸದರಿ ಮನೆಯಲ್ಲಿ ತನ್ನ ಪರಿವಾರ ಸಮೇತ ವಾಸವಿದ್ದಾನೆ ಎಂದರೆ ಸರಿ. 1 ನೇ ಪ್ರತಿವಾದಿ ತಂದೆ ಮರಣ ಹೊಂದಿ 10 ವರ್ಷ ಕಳೆಯಿತು. ಸದರಿ ಮನೆಯ ಉತ್ತರ ಮತ್ತು ದಕ್ಷಿಣಕ್ಕೆ ಜಮೀನು ಇದೆ ಎಂದರೆ ಸರಿಯಲ್ಲ. ಸರ್ವೆ ನಂ ಃ 18/7 ರಲ್ಲಿ 1 ನೇ ಪ್ರತಿವಾದಿ ತನ್ನ ಹಿಸ್ಸೆದ ಜಮೀನಿನಲ್ಲಿ ಮನೆ ಕಟ್ಟಿದ್ದಾನೆಂದರೆ ಸರಿಯಲ್ಲ. ರಿಸನಂಃ 18/7 ರ ಜಮೀನಿನ ಕುರಿತು ನನ್ನ ಮತ್ತು 1 ನೇ ಪ್ರತಿವಾದಿ ನಡುವೆ ದಾವೆ ಇತ್ತು ಅದರ ಸಂಖ್ಯೆಃ 105/1998

ಸದರಿ ದಾವೆ ರಾಜಿಯಲ್ಲಿ ಕೊನೆಗೊಂಡಿತ್ತು. ಸದರಿ ದಾವೆಯಲ್ಲಿ ನಾನು ವಕೀಲರ ಮೂಲಕ ಹಾಜರಾಗಿ ತಕರಾರು ಸಲ್ಲಿಸಿದ್ದೆ ಎಂದರೆ ಸರಿ. ಸದರಿ ರಾಜಿನ್ವಯ ನನಗೆ ಮತ್ತು 1 ನೇ ಪ್ರತಿವಾದಿಗೆ ಸಮನಾರ್ದ ಹಿಸ್ಸೆ ಬಂದಿದೆ. 2 ನೇ ವಾದಿ ಅಸಲು ದಾವೆ ನಂ ಃ 105/1998 ಕ್ಕೆ ಪಕ್ಷಗಾರರಾಗಿದ್ದರು. ಸದರಿ ರಾಜಿ ಅನ್ವಯ ನಾನು ಸದರಿ ಜಮೀನಿನ ಸ್ವಾದೀನನದಲ್ಲಿದ್ದೇನು ಎಂದರೆ ಸರಿ. ಈ ದಾವೆಯಲ್ಲಿ ಈ ಹಿಂದಿನ ದಾವೆ 105/1998 ರ ಕುರಿತಾದ ಮಾಹಿತಿ ಉಲ್ಲೇಖಿಸಿಲ್ಲ. ನಮ್ಮ ಕುಟುಂಬಕ್ಕೆ ಸೇರಿದ ರಿಸನಂ ಃ 18/7 ರ ಕುರಿತು ತಕಾರಾರು ಉಂಟಾಗಿದ್ದರಿಂದ ಈ ಹಿಂದಿನ ದಾವೆ ದಾಖಲಿಸಿದ್ದೇವು. ಈ ಹಿಂದಿನ ದಾವೆಯಲ್ಲಿ ನಮ್ಮ ಕುಟುಂಬದ ಇತರ ಸ್ವತ್ತುಗಳ ಕುರಿತು ಉಲ್ಲೇಖಿಸಿಲ್ಲ ಎಂದರೆ ಸಾಕ್ಷಿಯು ಉಳಿದ ಸ್ವತ್ತುಗಳ ಕುರಿತು ತಕರಾರು ಇರಲಿಲ್ಲ ಎಂದು ಹೇಳುತ್ತಾರೆ.

ರಿಸನಂಃ 161 ಹಾಗೂ 162 ಲಕ್ಷ್ಮಣ ಬಾಬಾಜಿ ಪಾಟೀಲ ಇವರಿಗೆ ಸೇರಿತ್ತು. ಸದರಿ ಜಮೀನಿನನ್ನು 1 ನೇ ಪ್ರತಿವಾದಿಯ ತಂದೆ ರೈತನಾತೆಯಿಂದ ಸಾಗು ಮಾಡುತ್ತಿದ್ದ ಎಂದರೆ ಸಾಕ್ಷಿಯು ಇಬ್ಬರೂ ಸಾಗು ಮಾಡುತ್ತಿದ್ದೇವು ಎಂದು ಹೇಳುತ್ತಾರೆ. ಸದರಿ ಜಮೀನಿನ ಕುರಿತು ನನ್ನ ತಂದೆಯವರು ರೈತನಾತೆಯಿಂದ ಸಾಗು ಮಾಡುತ್ತಿದ್ದರು ಎಂದು ತೋರಿಸುವ ದಾಖಲೆ ನಮ್ಮಲ್ಲಿ ಇಲ್ಲ. ಸದರಿ ಜಮೀನವನ್ನು ನಮ್ಮ ಹೆಸರಿಗೆ ಮಂಜೂರು ಮಾಡಕು ಭೂ ನ್ಯಾಯ ಮಂಡಳಿಗೆ ನಾನು ಅಥವಾ ನನ್ನ ತಂದೆ ಅರ್ಜಿ ಕೊಟ್ಟಿಲ್ಲ, ಸಾಕ್ಷಿಯು ನಮ್ಮ ಕುಟುಂಬದ ಮುಖ್ಯಸ್ಥ ಪ್ರತಿವಾದಿ 1 ರವರ ತಂದೆಯಾಗಿದ್ದು ಅವರು ಅರ್ಜಿ ಕೊಟ್ಟಿದ್ದಾರೆ ಎಂದು ಹೇಳುತ್ತಾರೆ. 1 ನೇ ಪ್ರತಿವಾದಿ ತಂದೆ ಭೂ ನ್ಯಾಯ ಮಂಡಳಿ ಮುಂದೆ ಅರ್ಜಿ ಸಲ್ಲಿಸಿರುವ ವಿಚಾರ ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ನಮ್ಮ ತಂದೆಗೆ ಗೊತ್ತು ಎಂದು ಹೇಳುತ್ತಾರೆ. ಅದರನ್ವಯ 1 ನೇ ಪ್ರತಿವಾದಿ ತಂದೆಯ ಹೆಸರಿಗೆ ಸದರಿ ಜಮೀನು ಮಂಜೂರಾಗಿದೆ ಎಂದರೆ ಸಾಕ್ಷಿಯು ಎಲ್ಲರ ಪರವಾಗಿಯೂ ಮಂಜೂರಾಗಿದೆ ಎಂದು

ಹೇಳುತ್ತಾರೆ. ಸದರಿ ಜಮೀನು ಮಂಜೂರಾದ ಬಗ್ಗೆ ನನ್ನ ತಂದೆಯವರು ಒಪ್ಪಿದ ಹಣ ಕಟ್ಟಿದ್ದಾರೆ ಆದರೆ ಅದರ ಮೊತ್ತ ನನಗೆ ಗೊತ್ತಿಲ್ಲ. ನಿಮ್ಮ ತಂದೆಯವರು ಸದರಿ ಸ್ವತ್ತನ್ನು ತನ್ನ ಹೆಸರಿಗೆ ಖಾತೆ ಮಾಡಲು ಅರ್ಜಿ ಕೊಟ್ಟಿದ್ದಾರೆಯೇ ಎಂದು ಕೇಳಿದರೆ ಸಾಕ್ಷಿಯು ನನ್ನ ತಂದೆ ಅನಕ್ಷರಸ್ಥರಾಗಿದ್ದು ನಮ್ಮ ಒಟ್ಟು ಕುಟುಂಬಕ್ಕೆ ಮಂಜೂರಾಗಿರುವದರಿಂದ ಕೊಟ್ಟಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಮರಣ ಹೊಂದಿ 15 ವರ್ಷ ಕಳೆಯಿತು. ನನ್ನ ತಂದೆಯ ಮರಣದ ನಂತರ ವಾರಸಾ ಪ್ರಕಾರ ನನ್ನ ಹೆಸರು ದಾಖಲಿಸಲು ಕಂದಾಯ ಇಲಾಖೆಗೆ ಅರ್ಜಿ ಕೊಟ್ಟಿದ್ದೆ. ನಾನು ಕೊಟ್ಟಿದ್ದೇನೆ ಎಂದು ಹೇಳುವ ಅರ್ಜಿಯಲ್ಲಿ ಸರ್ವೆ ನಂ 161 ಮತ್ತು 162 ಇರಲಿಲ್ಲ ಎಂದರೆ ಸಾಕ್ಷಿಯು ಎರಡು ಜಮೀನುಗಳು ನನ್ನ ತಂದೆಯ ಹೆಸರಿಗೆ ಇರಲಿಲ್ಲ ಕಾರಣ ನಮೂದು ಮಾಡಲಿಲ್ಲ ಎಂದು ಹೇಳುತ್ತಾರೆ. ಸದರಿ ಸ್ವತ್ತಿನ ಉತಾರನಲ್ಲಿ ನಿಮ್ಮ ಹೆಸರು ದಾಖಲಿಸಲು ಅರ್ಜಿ ಕೊಟ್ಟಿದ್ದೀರಾ ಎಂದು ಕೇಳಿದರೆ ಸಾಕ್ಷಿಯು ನಾವು ದಾವೆಯನ್ನೆ ಸಲ್ಲಿಸಿದ್ದೇವೆ ಎಂದು ಹೇಳುತ್ತಾರೆ. ರಿಸನಂಃ 161 ಮತ್ತು 162 ,1 ನೇ ಪ್ರತಿವಾದಿಯ ಸ್ವಾದೀನದಲ್ಲಿದೆ ಎಂದೆರ ಸರಿಯಲ್ಲ. 1 ನೇ ಪ್ರತಿವಾದಿ ತನ್ನ ತಂದೆಯ ಮರಣದ ನಂತರ ಸದರಿ ಜಮೀನುಗಳನ್ನು ವಾರಸಾ ಪ್ರಕಾರ ಖಾತೆ ಮಡಲು ಅರ್ಜಿ ಕೊಟ್ಟಿದ್ದ ಎಂದರೆ ಸಾಕ್ಷಿಯು ಅದಕ್ಕೆ ನಾನು ತಕರಾರು ಸಲ್ಲಿಸಿದ್ದ ಎಂದು ಹೇಳುತ್ತಾರೆ. ನೀವು ಕೊಟ್ಟಿರುವ ತಕರಾರನ್ನು ತೀರಸ್ಕರಿಸಿ 1 ನೇ ಪ್ರತಿವಾದಿ ಹೆಸರಿಗೆ ವಾರಸಾ ಪ್ರಕಾರ ಖಾತೆ ಮಾಡಿದ್ದಾರೆಂದರೆ ಸಾಕ್ಷಿಯು ತಹಶೀಲದಾರ ಇವರಿಗೆ ಹಣ ಕೊಟ್ಟು ಖಾತೆ ಮಾಡಿಸಿಕೊಡಿಂದ್ದಾರೆಂದು ಹೇಳುತ್ತಾರೆ. ಅದರ ಮೇಲೆ ನಾನು ಅಪೀಲು ಸಲ್ಲಿಸಿಲ್ಲ. ರಿಸನಂ ಃ 162 ರ ಜುನು ಹೊಳೆ ದಂಡೆಗೆ ಇದೆ ಎಂದರೆ ಸರಿ. ಸದರಿ ಜಮೀನಿಗೆ ಹೊಳೆಯಿಂದ ಮೋಟರ ಪಂಪಸೇಟ ಅಳವಡಿಸಿದ್ದು , ಸದರಿ ಪಂಪಸೇಟ್ 1 ನೇ ಪ್ರತಿವಾದಿ ಹೆಸರಿಗೆ ಇದೆ. ಸದರಿ ಪಂಪಸೇಟ್ ನಿಂದ 1 ನೇ ಪ್ರತಿವಾದಿ ಕಬ್ಬು ಬೆಳೆಸುತ್ತಾರೆಂದರೆ ಸಾಕ್ಷಿಯು

ಓ ಎಸ್ ನಂ ಃ 88/2014 ( ಪಿಬ್ಲೂ -1)

ದಿಃ 16-02-2018

ಇಬ್ಬರೂ ಬೆಳೆಸುತ್ತೇವೆ ಎಂದು ಹೇಳುತ್ತಾರೆ. ಕಬ್ಬನ್ನು ವಿಶ್ವನಾಥ ಶುಗರ್ಸ್ ಕಾರ್ಖಾನೆ ಬಾಗೇವಾಡಿಗೆ ಹೊಡೆದ ಬಗ್ಗೆ ನನ್ನಲ್ಲಿ ದಾಖಲೆ ಇದೆ. 2017–18 ಸಾಲಿನ ಹಂಗಾಮಿಗೆ 18 ಟನ್ ಕಬ್ಬು ಹೊಡೆದಿದ್ದೇನೆ. ಸದರಿ ಕಾರ್ಖಾನೆಗೆ ಮೊದಲಿನಿಂದಲೂ ಕಬ್ಬನ್ನು ಹೊಡೆಯುತ್ತಾ ಬಂದಿದ್ದೇನೆ. ನಾನು ಪ್ರತಿವರ್ಷ ಕಬ್ಬನ್ನು ಕಾರ್ಖಾನೆಗೆ ಹೊಡೆಯಲಿಲ್ಲ. ಕಬ್ಬನ್ನು ಹೊಡೆದ ಬಗ್ಗೆ ಕಾರ್ಖಾನೆಯವರು ರಸೀದಿಯಲ್ಲಿ ಕಬ್ಬು ಹೊಡೆದವನರ ಹೆಸರು , ಜಮೀನಿನ ಸರ್ವೆ ನಂಬರ , ಕಬ್ಬಿನ ತೂಕ ನಮೂದಿಸುತ್ತಾರೆಂದರೆ ಸರಿ . ರಿಸನಂಃ 161 ಮತ್ತು 162 ರಲ್ಲಿ 1 ನೇ ಪ್ರತಿವಾದಿ ಕಳೆದ 15–20 ವರ್ಷಗಳಿಂದ ಮಾತ್ರ ಕಬ್ಬು ಬೆಳೆದು ಕಾರ್ಖಾನೆಗೆ ಹೊಡೆದಿದ್ದಾನೆಂದರೆ ಸಾಕ್ಷಿಯು ಇಬ್ಬರೂ ಹೊಡೆದಿದ್ದೇವೆ ಎಂದು ಹೇಳುತ್ತಾರೆ. ಇಬ್ಬರು ಕಬ್ಬನ್ನು ಒಟ್ಟಿಗೆ ಬೆಳೆದು ಪ್ರತ್ಯೇಕವಾಗಿ ಕಾರ್ಖಾನೆಗೆ ಹೊಡೆಯುತ್ತಿದ್ದೇವೆ. ನಾನನು ಹೇಳಿದಂತೆ ನನ್ನ ಹೆಸರಿಗೆ ಯಾವತ್ತು ಕಬ್ಬನ್ನು ಕಾರ್ಖಾನೆಗೆ ಹೊಡೆದಿಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ನ್ಯಾಯಾಲಯದ ಅವದಿ ಮುಗಿದಿರುವದರಿಂದ ಪಾಟೀ ಸವಾಲನ್ನು ಮುಂದುಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ